# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಕೋರಮಂಗಲ ಉಪ-ವಿಭಾಗದ, ಆಡುಗೋಡಿ ವಾರ್ಡ್ ಸಂಖ್ಯೆ-147
## ದಿನಾಂಕ: 05-12-2020 ರಂದು ಡಿಸೆಂಬರ್-2020 ಮಾಹೆಯ
## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಶ್ರೀ ಬಸವರಾಜ್ ಕಬಾಡೆ, ಅಧೀಕ್ಷಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 147ರ ರವರ ಅಧ್ಯಕ್ಷತೆಯಲ್ಲಿ ಬಿ.ಬಿ.ಎಂ.ಪಿ ವಾಣಿಜ್ಯ ಸಂಕೀರ್ಣ. (ಕಾರ್ಯಪಾಲಕ ಅಭಿಯಂತರರ ಕಛೇರಿ) ಆಡುಗೋಡಿಯಲ್ಲಿ ದಿನಾಂಕ: 05.12.2020 ರಂದು ಬೆಳಗ್ಗೆ 10.00 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

ಹಾಜರಿದ್ದ ಸದಸ್ಯರು:-

1. ಶ್ರೀ ಪೊರಾಪಾಂಡಿಯನ್
2. ಶ್ರೀ ಕೆಂಪರಾಜು
3. ಶ್ರೀ ಬಿ.ಡಿ. ನಾಗರಾಜು
4. ಶ್ರೀಮತಿ ವಿ. ಹೇಮಾವತಿ
5. ಶ್ರೀ ಸಂಪತ್

ಹಾಜರಿದ್ದ ಅಧಿಕಾರಿಗಳು:-

1. ಶ್ರೀ ಬಸವರಾಜ್ ಕಬಾಡೆ, ಅಧೀಕ್ಷಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
2. ಶ್ರೀ ವೆಂಕಟೇಶ್, ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್-147, ಆಡುಗೋಡಿ
3. ಶ್ರೀ ಶಾಹಿದ್ ಹೈದರ್, ಹಿರಿಯ ಆರೋಗ್ಯ ನಿರೀಕ್ಷಕರು
4. ಶ್ರೀ ದುರ್ಗಾ ಪ್ರಸಾದ್, ಕಿರಿಯ ಆರೋಗ್ಯ ಪರಿವೀಕ್ಷಕರು
5. ಶ್ರೀ ಪಿ. ಜ್ಞಾನೇಶ್, ಸಹಾಯಕ ಅಭಿಯಂತರರು (ಎಲೆಕ್ಟ್ರಿಕಲ್)
6. ಶ್ರೀ ರುದ್ರೇಶ್ ಹೆಚ್.ಕೆ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
7. ಶ್ರೀ ವಿಜಯ್‌ಕುಮಾರ್, ತೆರಿಗೆ ವಸೂಲಿಗಾರರು, ಕಂದಾಯ ಇಲಾಖೆ
8. ಶ್ರೀಮತಿ ಶೃತಿ ಆರ್ ಸಮರ್ಥನಮ್
9. ಶ್ರೀಮತಿ ರಶ್ಮಿ, ಸಮರ್ಥನಮ್
10. ಶ್ರೀಮತಿ ಮಂಗಳ ಎಂ.ಎಂ., ಸಮರ್ಥನಮ್
11. ಶ್ರೀ ನಾಗರಾಜು .ಜಿ, ಸಮರ್ಥನಮ್
12. ಶ್ರೀಮತಿ ಪದ್ಮ .ವಿ, ಸಮರ್ಥನಮ್

* * * * *

ಶ್ರೀ ಬಸವರಾಜ್ ಕಬಾಡೆ, ಅಧೀಕ್ಷಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 147 ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳನ್ನು ಹಾಗೂ ವಾರ್ಡ್‌ನ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು, ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲು ತಿಳಿಸಿದರು.

ನೋಡಲ್ ಅಧಿಕಾರಿಗಳು ಆಡುಗೋಡಿ ವಾರ್ಡ್‌ನಲ್ಲಿರುವ ಸಾರ್ವಜನಿಕರ ಶೌಚಾಲಗಳ ನಿರ್ವಹಣೆ ಬಗ್ಗೆ ಹಾಗೂ ಶೌಚಾಲಯದ ಸ್ಥಿತಿ ಉತ್ತಮವಾಗಿದೆಯೇ, ಇಲ್ಲವೇ ಹಾಳಾಗಿದೆಯೇ ಮತ್ತು ಅವುಗಳ ನಿರ್ವಹಣೆ ಸರಿಯಾಗಿ ನಡೆಯುತ್ತಿದೆಯೇ ಎಂಬುವುದರ ಮಾಹಿತಿಗಳನ್ನು ನೀಡುವಂತೆ ಸಭೆಗೆ ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಹಾಗೂ ಆರೋಗ್ಯ ಪರಿವೀಕ್ಷಕರು ವಾರ್ಡ್‌ನಲ್ಲಿರುವ ಸಾರ್ವಜನಿಕ ಶೌಚಾಲಯಗಳ ನಿರ್ವಹಣೆ ಬಗ್ಗೆ ಸಂಪೂರ್ಣ ಮಾಹಿತಿಗಳನ್ನು ಸಭೆಗೆ ತಿಳಿಸಿದರು.



Scanned by CamScanner

ಆಡುಗೋಡಿ ವಾರ್ಡ್‌ನಲ್ಲಿರುವ ಪಾದಚಾರಿ ಮಾರ್ಗದ ಈಗಿರುವ ಸ್ಥಿತಿ ಮತ್ತು ಉತ್ತಮ ಸ್ಥಿತಿಯಲ್ಲಿದೆಯೇ ಅಥವಾ ಹಾಳಾಗಿದೆಯೇ ಎಂಬುವುದರ ಸಂಪೂರ್ಣ ವಿವರಗಳನ್ನು ಮುಂದಿನ ಸಭೆಯಲ್ಲಿ ನೀಡುವಂತೆ ನೋಡಲ್ ಅಧಿಕಾರಿಗಳು ವಾರ್ಡ್-147 ರ ಇಂಜಿನಿಯರ್‌ಗೆ ತಿಳಿಸಿದರು.

ಆಡುಗೋಡಿ ವಾರ್ಡ್‌ನಲ್ಲಿನ ಕಾಮಗಾರಿಗೆ ಸಂಬಂಧಿಸಿದಂತೆ, ಕಾಮಗಾರಿ ಕಾರ್ಯಾದೇಶ ಪಡೆದು ಕಾಮಗಾರಿಯನ್ನು ಪ್ರಾರಂಭಿಸದೇ ಇರುವ ಗುತ್ತಿಗೆದಾರರಿಗೆ ಕೂಡಲೇ ನೋಟಿಸ್ ಜಾರಿ ಮಾಡಬೇಕೆಂದು ನೋಡಲ್ ಅಧಿಕಾರಿಗಳು ವಾರ್ಡ್-147 ಸಹಾಯಕ ಇಂಜಿನಿಯರ್ ಆದ ಶ್ರೀ ವೆಂಕಟೇಶ್ ರವರಿಗೆ ತಿಳಿಸಿದರು.

ಘನತ್ಯಾಜ್ಯಕ್ಕೆ ಸಂಬಂಧಿಸಿದಂತೆ, ಕಸ ಸಂಗ್ರಹಣೆ ಹಾಗೂ ಕಸ ವಿಲೇವಾರಿಯು ಸಮರ್ಪಕವಾಗಿ ನಡೆಯದೇ ಸಮಸ್ಯೆಗಳು ಇನ್ನೂ ಬಗೆಹರಿದಿರುವುದಿಲ್ಲ. ಆದ್ದರಿಂದ ಮುಂದಿನ ಸಭೆಗೆ ಕಸ ಸಂಗ್ರಹಣೆ ಮತ್ತು ಕಸ ವಿಲೇವಾರಿ ಬಗ್ಗೆ ಕೈಗೊಂಡಿರುವ ಸಂಪೂರ್ಣ ಮಾಹಿತಿಯೊಂದಿಗೆ ಕಸದ ಗುತ್ತಿಗೆದಾರರು ಹಾಜರಿರುವಂತೆ ತಿಳಿಸಿ, ನೋಟಿಸ್ ನೀಡಲು ತಿಳಿಸಿದರು.

ರಸ್ತೆಯಲ್ಲಿ ಹಾಗೂ ಎಲ್ಲೆಂದರಲ್ಲಿ ಕಸ ಹಾಕುವವರ ಸಾರ್ವಜನಿಕರ ಮೇಲೆ ಸ್ಥಳದಲ್ಲಿಯೇ ದಂಡ ವಿಧಿಸಲು ಹಾಗೂ ದಂಡವನ್ನು ಜಾಸ್ತಿ ಮಾಡಲು ನೋಡಲ್ ಅಧಿಕಾರಿಗಳು ತಿಳಿಸಿದರು.

ಕಸ ವಿಂಗಡಣೆಯ ಪ್ರಮಾಣ ತುಂಬಾ ಕಡಿಮೆಯಾಗಿದ್ದು, ಶೇ.80 ರಷ್ಟು ತರಲು ನೋಡಲ್ ಅಧಿಕಾರಿಗಳು ಸಮರ್ಥನಮ್ ತಂಡದವರಿಗೆ ಸೂಚಿಸಿದರು.

ಶ್ರೀ ಪಾಂಡಿಯನ್ ಮಾತನಾಡಿ, ರಸ್ತೆಗುಂಡಿಗಳನ್ನು ಮುಚ್ಚುವಂತೆ ಸಭೆಗೆ ತಿಳಿಸಿದರು ಹಾಗೂ ನೋಡಲ್ ಅಧಿಕಾರಿಗಳು ಸಹ ರಸ್ತೆಗುಂಡಿಗಳನ್ನು ಮುಚ್ಚಲು ಕೂಡಲೇ ಕ್ರಮಗಳನ್ನು ಕೈಗೊಳ್ಳುವಂತೆ ತಿಳಿಸಿದರು.

ಎಲ್.ಇ.ಡಿ. ಲೈಟ್‌ಗಳ ಅಳವಡಿಕೆ direction ಸರಿಪಡಿಸಲು ಹಾಗೂ ಹದಗೆಟ್ಟಿರುವ ದೀಪಗಳನ್ನು ಬದಲಾಯಿಸಿ, ಸರಿಪಡಿಸಲು ಬೀದಿ ದೀಪಗಳು ಇಲಾಖೆಯ ಅಧಿಕಾರಿಗಳಾದ ಶ್ರೀ ಜ್ಞಾನೇಶ್ ರವರಿಗೆ ನೋಡಲ್ ಅಧಿಕಾರಿಗಳು ತಿಳಿಸಿದರು.

ನೋಡಲ್ ಅಧಿಕಾರಿಗಳು ವಾರ್ಡ್ ಮಾರ್ಷಲ್ ರವರಿಗೆ ಮಾಸ್ಕ್ ಹಾಕದವರಿಂದ ಪಡೆದ ದಂಡದ ವಿವರಗಳು ಹಾಗೂ ಕಸವನ್ನು ಎಲ್ಲೆಂದರಲ್ಲಿ ಹಾಕುವವರಿಂದ ಪಡೆದ ದಂಡದ ಮೊತ್ತದ ವಿವರಗಳನ್ನು ನೀಡುವಂತೆ ಸಭೆಗೆ ತಿಳಿಸಿದರು. ವಾರ್ಡ್‌ನಲ್ಲಿ ನಿರ್ವಹಿಸುವ ಮಾರ್ಷಲ್‌ಗಳು ದಂಡದ ವಿವರಗಳನ್ನು ಸಭೆಗೆ ತಿಳಿಸಿದರು. ನೋಡಲ್ ಅಧಿಕಾರಿಗಳು ಮಾರ್ಷಲ್‌ಗಳಿಗೂ ಪ್ರೋತ್ಸಾಹಕ ಧನವನ್ನು ಕೊಡಿಸುವುದಾಗಿ ಭರವಸೆ ನೀಡಿದರು.

ಆಡುಗೋಡಿ ವಾರ್ಡ್‌ನಲ್ಲಿ ಒಂಟಿ ಮನೆ ನಿರ್ಮಾಣಕ್ಕಾಗಿ ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿದ ಶ್ರೀಮತಿ ಲತಾ ಹಾಗೂ ಶ್ರೀ ಲಿತಿನ್ .ಜಿ ಫಲಾನುಭವಿಗಳಿಗೆ ವಾರ್ಡ್ ಸಮಿತಿ ಸಭೆಯಲ್ಲಿ ಅನುಮೋದನೆಯನ್ನು ಪಡೆಯಲಾಯಿತು.

ಕೊನೆಯದಾಗಿ ಮಾನ್ಯ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಕಾರ್ಯದರ್ಶಿ ಮತ್ತು ನೋಡಾಲ್ ಅಧಿಕಾರಿಯವರಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ ವೆಂಕಟೇಶ)
ಸದಸ್ಯ ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು,
ವಾರ್ಡ್-147 ಆಡುಗೋಡಿ ವಿಭಾಗ



Scanned by CamScanner



Scanned by CamScanner



Scanned by CamScanner



Scanned by CamScanner